# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ

ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ,
ಕರ್ನಾಟಕ ಸರ್ಕಾರ

'ವಿಜ್ಞಾನ ಭವನ' ನಂ: 24/2, 3ನೇ ಮಹಡಿ, 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-560070

ದೂರವಾಣಿ: 080-26711166 ಇ-ಮೇಲ್: ksteps.dst@gmail.com


ನಂ. KSTePS/VGST/2020-21/K-FIST(L2)/GRD-943/37/2021-22/969 ದಿನಾಂಕ: 16.11.2021

ಮಾನ್ಯರೇ,

ವಿಷಯ: ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ **KFIST (L2)** ಯೋಜನೆಯಡಿಯಲ್ಲಿ ಮೊದಲನೇ ಕಂತಿನ ಅನುದಾನ ಬಿಡುಗಡೆ ಮಾಡಿರುವ ಬಗ್ಗೆ.

*******

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು, ಖ್ಯಾತ ವಿಜ್ಞಾನಿ ಭಾರತರತ್ನ ಪ್ರೊಫೆಸರ್ ಸಿ.ಎನ್.ಆರ್. ರಾವ್, F.R.S. ರವರ ಅಧ್ಯಕ್ಷತೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ (ವಿತಂದಾಸ) ವನ್ನು 2008ರಲ್ಲಿ ಸ್ಥಾಪಿಸಿದ್ದು, ಈ ಯೋಜನೆಯಡಿ ಹಲವಾರು ವೈಜ್ಞಾನಿಕ ಕಾರ್ಯಕ್ರಮಗಳನ್ನು ಕಳೆದ 12 ವರ್ಷಗಳಿಂದ ರಾಜ್ಯಾದ್ಯಂತ ಯಶಸ್ವಿಯಾಗಿ ಅನುಷ್ಠಾನಗೊಳಿಸಿಕೊಂಡು ಬರುತ್ತಿರುವುದು ಸರಿಯಷ್ಟೆ. 2020-21ನೇ ಸಾಲಿನಲ್ಲಿ ತಮ್ಮ ಸಂಸ್ಥೆಯಿಂದ ಸಲ್ಲಿಸಿದ ಪ್ರಸ್ತಾವನೆಯಾದ **"Cyber Security-Centre of Excellence Lab"** ನ್ನು ವಿತಂದಾಸದ ಪ್ರಮುಖ ಕಾರ್ಯಕ್ರಮವಾದ **Karnataka Fund for Infrastructure Strengthening in Science and Technology in Higher Educational Institutions (KFIST (L2))** ಅಡಿಯಲ್ಲಿ ದಾರ್ಶನಿಕ ಸಮೂಹವು ಆಯ್ಕೆ ಮಾಡಿ, ಸರ್ಕಾರ ಆದೇಶ ನೀಡಿರುವುದು ತಮಗೆ ತಿಳಿದ ವಿಷಯವಾಗಿದೆ.

ಆದುದರಿಂದ, ತಮ್ಮ ಸಂಸ್ಥೆಯಿಂದ ಆಯ್ಕೆಗೊಂಡ ಪ್ರಸ್ತಾವನೆಗೆ ಮೊದಲನೇ ಕಂತಾಗಿ ರೂ. 10,00,000/-ಗಳ ಅನುದಾನವನ್ನು ಕೆಸ್ಟೆಪ್ಸ್‌ನಿಂದ **Principal, SSIT, Tumkuru** ಹೆಸರಿನ ಬ್ಯಾಂಕ್ ಖಾತೆಗೆ **(UTR No. SBINR52021100444986883) RTGS** ಮೂಲಕ ದಿನಾಂಕ: 04.10.2021 ರಂದು ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಅನುದಾನವನ್ನು ಸ್ವೀಕರಿಸಿದ ನಂತರ, ಸ್ವೀಕೃತ ರಶೀದಿ **(Acknowledgement)** ಯನ್ನು ಕೆಸ್ಟೆಪ್ಸ್ ಸಂಸ್ಥೆಗೆ ಕಳುಹಿಸುವುದು.

ಮುಂದುವರೆದು, ಪ್ರಸ್ತುತ ಬಿಡುಗಡೆ ಮಾಡುತ್ತಿರುವ 1ನೇ ಕಂತಿನ ಅನುದಾನಕ್ಕೆ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳನ್ವಯ ಉದ್ದೇಶಿತ ಯೋಜನೆಗೆ ಮಾತ್ರ ಬಳಸಿಕೊಳ್ಳುವುದು.

**ಷರತ್ತು ಮತ್ತು ನಿಬಂಧನೆಗಳು:**

ಅ) ನಿಗದಿತ ನಮೂನೆಯಲ್ಲಿರುವಂತೆ ಪ್ರಾಯೋಜಕತ್ವದ ಸಂಸ್ಥೆ/ಇಲಾಖೆಯ ಹೆಸರನ್ನು ಫಲಾನುಭವಿ ಸಂಸ್ಥೆಗಳಲ್ಲಿ ಸ್ಥಾಪಿಸಲಾಗಿರುವ ವಿತಂದಾಸದ ಸಂಶೋಧನಾ/ಬೋಧನಾ ಕೇಂದ್ರಗಳಲ್ಲಿ ಕಡ್ಡಾಯವಾಗಿ ಬೋರ್ಡ್ (ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ) ಅನ್ನು ಅಳವಡಿಸುವುದು.

...2

ಆ) ಉದ್ದೇಶಿತ ಯೋಜನೆ/ಕಾರ್ಯಕ್ರಮವನ್ನು ತಮ್ಮ ಸಂಸ್ಥೆಯಿಂದಾಗಲೀ ಅಥವಾ ಬೇರೆ ಸಂಸ್ಥೆಗಳ ಮುಖಾಂತರವಾಗಲೀ ಅನುಷ್ಠಾನಗೊಳಿಸುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ -1999 ಮತ್ತು ನಿಯಮಗಳು 2000 **(KTPP Act-1999 & Rules-2000)** ಕರ್ನಾಟಕ ಆರ್ಥಿಕ ಸಂಹಿತೆ **(KFC)** ಹಾಗೂ ಕರ್ನಾಟಕ ಸರ್ಕಾರದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಕಡ್ಡಾಯವಾಗಿ ಅನುಸರಿಸುವುದು/ಪಾಲಿಸುವುದು.

ಇ) ಪ್ರತಿ 3 ತಿಂಗಳಿಗೊಮ್ಮೆ ಕಡ್ಡಾಯವಾಗಿ ಉದ್ದೇಶಿತ ಯೋಜನೆಯ ಅನುಷ್ಠಾನದ ಪ್ರಗತಿಯ ವರದಿಯನ್ನು ಸೂಕ್ತ ದಾಖಲೆಗಳೊಂದಿಗೆ ವಿತಂದಾಸಕ್ಕೆ ಸಲ್ಲಿಸುವುದು.

ಈ) ಉದ್ದೇಶಿತ ಯೋಜನೆಯ ಅನುಷ್ಠಾನಕ್ಕೆ ಬಿಡುಗಡೆಯಾಗುವ ಅನುದಾನದಿಂದ ಅನುಮೋದಿತ ಪಾರ್ಟ್-ಎ **(Part-A)** ನಲ್ಲಿ ನಮೂದಿತವಾಗಿರುವ ಉಪಕರಣಗಳು ಮಾತ್ರ ಖರೀದಿಸುವುದು ಇದರಲ್ಲಿ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ.

ಉ) ಫಲಾನುಭವಿ ಸಂಸ್ಥೆಗೆ ಬಿಡುಗಡೆ ಮಾಡುವ ಅನುದಾನವನ್ನು ಅಗತ್ಯಕ್ಕೆ ಅನುಗುಣವಾಗಿ ನೀಡಲಾದ ಉದ್ದೇಶಕ್ಕೆ ಮಾತ್ರ ಬಳಸುವುದು ಹಾಗೂ ಸದರಿ ಅನುದಾನಕ್ಕೆ ಬರುವ ಬ್ಯಾಂಕ್ ಬಡ್ಡಿ ಮೊತ್ತವನ್ನು ಯಾವುದೇ ಕಾರಣಕ್ಕೂ ಉದ್ದೇಶಿತ ಯೋಜನೆಯ ಅನುಷ್ಠಾನಕ್ಕೆ ಬಳಸಿಕೊಳ್ಳಲು ಅನುಮತಿ/ಅವಕಾಶವಿರುವುದಿಲ್ಲ.

ಊ) ಫಲಾನುಭವಿ ಸಂಸ್ಥೆಗೆ ಬಿಡುಗಡೆ ಮಾಡುವ ಅನುದಾನಕ್ಕೆ ಬ್ಯಾಂಕಿನಿಂದ ಬರುವ ಕ್ರೋಢೀಕೃತ **(Accrued)** ಬಡ್ಡಿಯ ಮೊತ್ತವನ್ನು ಉಪಯೋಗಿತಾ ಪ್ರಮಾಣಪತ್ರದಲ್ಲಿ ಕಡ್ಡಾಯವಾಗಿ ನಮೂದಿಸುವುದು ಮತ್ತು ಸದರಿ ಬಡ್ಡಿಯ ಮೊತ್ತದ ದೃಢೀಕರಣಕ್ಕೆ ಬ್ಯಾಂಕ್ ಖಾತಾ ಪಾಸ್ ಪುಸ್ತಕದ ನೋಂದಣಿಯ ಪ್ರತಿಯನ್ನು **(Latest up-to-date bank passbook copy)** ಅಥವಾ ಬ್ಯಾಂಕಿನಿಂದ ಪಡೆದ ದೃಢೀಕೃತ ಪತ್ರವನ್ನು ಕಡ್ಡಾಯವಾಗಿ ನೀಡುವುದು.

ಋ) ಸದರಿ ಅನುದಾನದ ಬಿಡುಗಡೆಯ ದಿನದಿಂದಲೇ ಉದ್ದೇಶಿತ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಂಡು ಒಂದು ವರ್ಷದ ಕಾಲಮಿತಿಯೊಳಗೆ ಸದರಿ ಅನುದಾನವನ್ನು ಕಡ್ಡಾಯವಾಗಿ ನಿಯಮಾನುಸಾರ ಬಳಸಿಕೊಂಡು ಉದ್ದೇಶಿತ ಕಾರ್ಯಕ್ರಮದ ಧ್ಯೇಯೋದ್ದೇಶಗಳನ್ವಯ ಅನುಷ್ಠಾನಗೊಳಿಸುವುದು.

ಎ) ಉದ್ದೇಶಿತ ಯೋಜನೆ/ಕಾರ್ಯಕ್ರಮವನ್ನು ಕ್ರಿಯಾ ಯೋಜನೆಯಲ್ಲಿ ತಿಳಿಸಿರುವಂತೆ ಅನುಷ್ಠಾನಗೊಳಿಸಿ ನೋಂದಾಯಿತ ಲೆಕ್ಕಪರಿಶೋಧಕರಿಂದ ಆಡಿಟ್ ಮಾಡಿಸಿ ವಿತಂದಾಸದ/ಕೆಸ್ಟೆಪ್ಸ್ ಒದಗಿಸಿರುವ ನಮೂನೆಯ ಉಪಯೋಗಿತ ಪ್ರಮಾಣಪತ್ರವನ್ನು **GRF-19A** ನಲ್ಲಿ **(ದ್ವಿಪ್ರತಿಯಲ್ಲಿ)** ಮತ್ತು ಕಾರ್ಯಕ್ರಮದ ಪ್ರಗತಿಯ ವರದಿಯನ್ನು ಉದ್ದೇಶಿತ ಯೋಜನೆಯ ಅನುಷ್ಠಾನದ ಕಾಲಮಿತಿ ಮುಕ್ತಾಯಗೊಂಡ ಒಂದು ತಿಂಗಳ ಅವಧಿಯೊಳಗೆ ಕೆಸ್ಟೆಪ್ಸ್ ಸಂಸ್ಥೆಯ ವಿತಂದಾಸ ಕಛೇರಿಗೆ ನೀಡುವುದು.

ಏ) ಉದ್ದೇಶಿತ ಯೋಜನೆಯ ಅನುಷ್ಠಾನಕ್ಕೆ ಬಿಡುಗಡೆಯಾಗುವ ಅನುದಾನಕ್ಕೆ ಬ್ಯಾಂಕಿನಿಂದ ಕ್ರೋಢೀಕೃತವಾಗುವ **(Accrued)** ಬಡ್ಡಿಯ ಮೊತ್ತವನ್ನು ಉಪಯೋಗಿತ ಪ್ರಮಾಣಪತ್ರದೊಂದಿಗೆ ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್ ಇವರ ಹೆಸರಿನಲ್ಲಿ ಚೆಕ್/ಡಿ.ಡಿ. ಮೂಲಕ ವಾಪಸ್ ನೀಡುವುದು.

ಐ) ಉದ್ದೇಶಿತ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾದ ದಾಖಲೆ ಪುಸ್ತಕವನ್ನು ನಿರ್ವಹಿಸುವುದು ಹಾಗೂ ಸಂಸ್ಥೆಯ ಮುಖ್ಯಸ್ಥರು ಮತ್ತು ಕಾರ್ಯಕ್ರಮ ಸಂಯೋಜಕರು ಯೋಜನೆಗೆ ಸಂಬಂಧಪಟ್ಟ ಎಲ್ಲಾ ಲೆಕ್ಕಪತ್ರಗಳನ್ನು ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ಸಂರಕ್ಷಿಸಿಡುವುದು. ಅಲ್ಲದೆ, ಸರ್ಕಾರದ ಮಹಾಲೇಖಪಾಲಕರು ಅಥವಾ ಕೆಸ್ಟೆಪ್ಸ್ ಸಂಸ್ಥೆಯ ತಪಾಸಣೆ ಹಾಗೂ ಮೌಲ್ಯಮಾಪನಕ್ಕಾಗಿ ಕೋರಿದಾಗ ಸದರಿ ದಾಖಲೆಗಳನ್ನು ಒದಗಿಸುವುದು.

ಒ) ಕೆಸ್ಟೆಪ್ಸ್/ ವಿತಂದಾಸದ ಅಧಿಕಾರಿಗಳು ಕಾರ್ಯಕ್ರಮದ ಅನುಷ್ಠಾನ ಮತ್ತು ಪ್ರಗತಿಯ ಬಗ್ಗೆ ಫಲಾನುಭವಿ ಸಂಸ್ಥೆಗೆ ಭೇಟಿ ನೀಡಿದಾಗ ಅಗತ್ಯ ದಾಖಲೆಗಳನ್ನು ಮತ್ತು ಭೌತಿಕ ಪ್ರಗತಿಯ ವಿವರಗಳನ್ನು ಒದಗಿಸುವುದು.

ಶುಭಾಶಯಗಳೊಂದಿಗೆ,

ತಮ್ಮ ವಿಶ್ವಾಸಿ,

ವ್ಯವಸ್ಥಾಪಕ ನಿರ್ದೇಶಕರು

**ಇವರಿಗೆ,**

The Principal
Sri Siddahartha Institute of Technology
Maralur, Tumakuru-572 105

**ಪ್ರತಿಗಳು:**

1. Dr. Srinidhi G A, Department of Electronics and Telecommunication Engineering, Sri Siddahartha Institute of Technology, Maralur, Tumakuru-572 105
2. ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ ವಿಭಾಗ, 7ನೇ ಮಹಡಿ, 4ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು– 01, ಇವರ ಅವಗಾಹನೆಗೆ ಮತ್ತು ಸೂಕ್ತ ಕ್ರಮಕ್ಕಾಗಿ